# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 234 | Pages. 2 | Date: 26-08-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 234 - ಪುಟಗಳು : 2 | 26-08-2026 | ಬುಧವಾರ | Ph: 8762954248 | ದರ : ₹1


## ಸಕಲೇಶಪುರದಲ್ಲಿ ಅಂತರರಾಜ್ಯ ಡ್ರಗ್ಸ್ ಜಾಲ ಪತ್ತೆ

# 100 ಗ್ರಾಂ MDMA ಜಪ್ತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಯುವಜನತೆಯನ್ನು ಗುರಿಯಾಗಿಸಿಕೊಂಡು ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದಡಿ ಸಕಲೇಶಪುರ ನಗರ ಠಾಣೆ ಪೊಲೀಸರು ಮಂಗಳವಾರ ನಡೆಸಿದ ದಿಡೀರ್ ಕಾರ್ಯಾಚರಣೆಯಲ್ಲಿ ಅಂತರರಾಜ್ಯ ಸಂಪರ್ಕ ಹೊಂದಿರುವ ಶಂಕೆಯ ಡ್ರಗ್ ಜಾಲಮೊಂದನ್ನು ಪತ್ತೆ ಹಚ್ಚಿದ್ದಾರೆ. ಮಂಗಳೂರು ಹಾಗೂ ಕೇರಳ ಮೂಲದ ಆರು ಮಂದಿಯನ್ನು ಬಂಧಿಸಿ, ಅವರಿಂದ ಅಂದಾಜು 10 ಲಕ್ಷ ಮೌಲ್ಯದ 100 ಗ್ರಾಂ ಒಆಒಂ ಹಾಗೂ ಸಾಗಾಟಕ್ಕೆ ಬಳಸಿದ್ದ ಎರಡು ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರುಗಳಲ್ಲಿ ನಿಂತುಕೊಂಡು ಮಾದಕ ವಸ್ತು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಲಭಿಸಿತ್ತು ಎನ್ನಲಾಗಿದೆ. ಮಾಹಿತಿ ಆಧರಿಸಿ ಮಂಗಳವಾರ ಮಧ್ಯಾಹ್ನ ಸುಮಾರು 2 ಗಂಟೆಗೆ ಪೊಲೀಸರು ಸ್ಥಳಕ್ಕೆ ತೆರಳಿ ದಿಡೀರ್ ದಾಳಿ ನಡೆಸಿದರು.

ದಾಳಿ ವೇಳೆ ಎರಡು ಕಾರುಗಳಲ್ಲಿದ್ದ ಆರು ಮಂದಿಯನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಅವರ ಬಳಿ ಒಆಒಂ ಪತ್ತೆಯಾಗಿದೆ ಎನ್ನಲಾಗಿದೆ. ಬಂಧಿತರ ಪೈಕಿ ನಾಲ್ವರು ಮಂಗಳೂರು ಮೂಲದವರಾಗಿದ್ದು, ಇಬ್ಬರು ಕೇರಳ ಮೂಲದವರು ಎಂದು ತಿಳಿದುಬಂದಿದೆ. ಆರೋಪಿಗಳಿಂದ ಸುಮಾರು 100 ಗ್ರಾಂ ಒಆಒಂ ವಶಪಡಿಸಿಕೊಳ್ಳಲಾಗಿದ್ದು, ಅದರ ಅಂದಾಜು ಮೌಲ್ಯ 10 ಲಕ್ಷ ಎನ್ನಲಾಗಿದೆ. ಮಾದಕ ವಸ್ತು ಸಾಗಾಟ ಹಾಗೂ ಮಾರಾಟಕ್ಕೆ ಬಳಸಲಾಗಿದೆ ಎನ್ನಲಾದ ಒಂದು ಹ್ಯುಂಡೈ ಕಾರು ಹಾಗೂ ಒಂದು ಮಾರುತಿ ಸುಜುಕಿ ಸ್ವಿಫ್ಟ್ ಡಿಜೈರ್ ಕಾರನ್ನೂ ಪೊಲೀಸರು ಜಪ್ತಿ ಮಾಡಿದ್ದಾರೆ.



**10 ಲಕ್ಷ ಮೌಲ್ಯದ ಮಾದಕ ವಸ್ತು ವಶ | ಮಂಗಳೂರು-ಕೇರಳ ಮೂಲದ ಆರು ಮಂದಿ ಬಂಧನ | ಎರಡು ಕಾರು ಜಪ್ತಿ**

ಬಂಧಿತರು ಮಾದಕ ವಸ್ತುವನ್ನು ಎಲ್ಲಿಂದ ತಂದಿದ್ದರು ಯಾರಿಗೆ ಮಾರಾಟ ಮಾಡಲು ಮುಂದಾಗಿದ್ದರು ಸ್ಥಳೀಯವಾಗಿ ಇವರ ಸಂಪರ್ಕದಲ್ಲಿರುವವರು ಯಾರು ಎಂಬ ಬಗ್ಗೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಪ್ರಕರಣಕ್ಕೆ ಅಂತರರಾಜ್ಯ ಸಂಪರ್ಕ ಇರುವ ಶಂಕೆ ಹಿನ್ನೆಲೆಯಲ್ಲಿ ತನಿಖೆಯ ವ್ಯಾಪ್ತಿ ಮತ್ತಷ್ಟು ವಿಸ್ತರಿಸುವ ಸಾಧ್ಯತೆಯಿದೆ.

ಡಿವೈಎಸ್ಪಿ ಮಾಲತೀಶ್ ಅವರ ಮಾರ್ಗದರ್ಶನದಲ್ಲಿ ಇನ್ಸ್ ಪೆಕ್ಟರ್ ವನರಾಜು ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ. ಸಬ್ ಇನ್ಸ್ ಪೆಕ್ಟರ್‌ಗಳಾದ ಮಹೇಶ್, ಕೃಷ್ಣಪ್ಪ ಹಾಗೂ ಸಿಬ್ಬಂದಿಗಳಾದ ರೇವಣ್ಣ, ಖಾದರ್, ಶ್ರೀಧರ, ರಘು, ಅಶೋಕ, ಮಧು, ಜಾಲಕ ಮಧು, ಹನುಮಂತ, ಯೋಗೇಶ್, ಮಂಜುನಾಥ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

### ಸಾರ್ವಜನಿಕರಿಂದ ಮೆಚ್ಚುಗೆ

ಯುವಜನತೆಯನ್ನು ಮಾದಕ ವಸ್ತುಗಳ ಪಿಡುಗಿನಿಂದ ರಕ್ಷಿಸುವ ನಿಟ್ಟಿನಲ್ಲಿ ನಗರ ಠಾಣೆ ಪೊಲೀಸರು ನಡೆಸಿದ ಕಾರ್ಯಾಚರಣೆಗೆ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳಿಂದ ಮೆಚ್ಚುಗೆ ವ್ಯಕ್ತವಾಗಿದೆ. ಆಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನಟಿಮೊ ಕಾರ್ಯಾಚರಣೆಯನ್ನು ಶ್ಲಾಘಿಸಿದ್ದು, ಯುವಕರನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಮಾದಕ ವಸ್ತುಗಳ ದಂಧೆಗೆ ಕಡಿವಾಣ ಹಾಕಲು ನಿರಂತರ ಹಾಗೂ ಕಠಿಣ ಪೊಲೀಸ್ ಕಾರ್ಯಾಚರಣೆ ಅಗತ್ಯ ಎಂದು ಅಭಿಪ್ರಾಯಪಟ್ಟಿದೆ.

ಮಾಜಿ ಶಾಸಕ ಹಾಗೂ ಡ್ರಗ್ಸ್ ಮುಕ್ತ ಭಾರತ ಆಂದೋಲನಟಿದ ಪ್ರಮುಖ ಎಚ್.ಎಂ. ವಿಶ್ವನಾಥ್, ಸಂಚಾಲಕ ಮಲ್ನಾಡ್ ಮೆಹಬೂಬ್, ಪದಾಧಿಕಾರಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ನಗರ ಠಾಣೆ ಪೊಲೀಸರ ತ್ವರಿತ ಕಾರ್ಯಾಚರಣೆಯನ್ನು ಅಭಿನಂದಿಸಿದ್ದಾರೆ.

## ಪ್ರವಾಸಿಗರು ನಿಯಮ ಪಾಲಿಸುವಂತೆ ಜಿಲ್ಲಾಧಿಕಾರಿ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲೆಯ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ಪ್ರವಾಸಿಗರು ಕಾನೂನು ಪಾಲನೆ ಮೂಲಕ ಪಾರಂಪರಿಕ ತಾಣಗಳ ರಕ್ಷಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದ್ದಾರೆ.

ಪ್ರತಿನಿತ್ಯ ಹಾಗೂ ವಾರಾಂತ್ಯಗಳಲ್ಲಿ ರಾಜ್ಯ, ದೇಶ ಹಾಗೂ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಪ್ರವಾಸಿಗರು ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು ಅನುಸರಿಸಬೇಕು. ಜಿಲ್ಲೆಯಲ್ಲಿ ಪ್ರವಾಸೋದ್ಯಮದ ಬೆಳವಣಿಗೆಯೊಂದಿಗೆ ವಿವಿಧ ರೆಸಾರ್ಟ್, ಹೋಂ ಸ್ಟೇ, ಹೋಟೆಲ್ ಹಾಗೂ ಇತರೆ ವಸತಿ ಘಟಕಗಳಲ್ಲಿ ತಂಗುವ ಪ್ರವಾಸಿಗರ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಪ್ರವಾಸಿಗರು ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ ಶಿಸ್ತು, ಸ್ಥಳೀಯ ಸಂಸ್ಕೃತಿ, ಸಂಪ್ರದಾಯ, ಧಾರ್ಮಿಕ ಆಚರಣೆಗಳು ಹಾಗೂ ದೇವಾಲಯಗಳ ಪಾವಿತ್ರ್ಯತೆಗೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ವರ್ತಿಸುವುದು, ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಹಾನಿ ಉಂಟುಮಾಡುವುದು, ಎಲ್ಲೆಂದರಲ್ಲಿ ಕಸ ಎಸೆಯುವುದು, ಮದ್ಯಪಾನ ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯ ವರ್ತನೆ ತೋರುವುದು, ಜೋರಾಗಿ ಸಂಗೀತ ಪ್ರಸಾರ ಮಾಡುವುದು, ಖಾಸಗಿ ವಾಹನಗಳನ್ನು ಸಂಘಟಿತ ರೀತಿಯಲ್ಲಿ ಚಲಾಯಿಸಿ ರೀಲ್ಸ್/ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡುವುದು ಹಾಗೂ ಸಾರ್ವಜನಿಕ ಶಾಂತಿ, ಸ್ಥಳೀಯರೊಂದಿಗೆ ಸೌಹಾರ್ದಯುತ ಸಂಬಂಧ ಹಾಗೂ ಪ್ರವಾಸೋದ್ಯಮದ ಉತ್ತಮ ಬೆಳವಣಿಗೆಗೆ ಧಕ್ಕೆಯಾಗುವಂತಹ ವರ್ತನೆಗಳು ಕಂಡುಬಂದಿರುವ ಬಗ್ಗೆ ದೂರುಗಳು ಬಂದಿವೆ ಎಂದು ಹೇಳಿದ್ದಾರೆ.

## ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ 2026-27ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಪಡೆದ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಬಿ.ಎ. ಹಾಗೂ ಬಿ.ಸಿ.ಎ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ನಡೆಯಿತು.

## ವಿಶ್ವ ಜನಸಂಖ್ಯೆ ದಿನಾಚರಣೆ ನಾಳೆ

ಹಾಸನ: ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ವತಿಯಿಂದ ಆ. 27ರ ಗುರುವಾರ ಬೆಳಿಗ್ಗೆ 10.30ಕ್ಕೆ ವಿಶ್ವ ಜನಸಂಖ್ಯಾ ದಿನಾಚರಣೆ ಹಾಗೂ ಆಧ್ಯಾತ್ಮಿಕ ಚಿಂತನಾ ಸಮಾವೇಶ ಏರ್ಪಡಿಸಲಾಗಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಂಶುಪಾಲ ಎಂ.ಬಾಲಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ. ಮೋಹನ್ ಸೇರಿ ಇತರರು ಪಾಲ್ಗೊಳ್ಳಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

## ವಿಪತ್ತು ನಿರ್ವಹಣೆಗೆ ಶೌರ್ಯ ಬಲ: ಸ್ವಯಂ ಸೇವಕರಿಗೆ ತರಬೇತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಜನಜಾಗೃತಿ ಪ್ರಾದೇಶಿಕ ವಿಭಾಗದ ಆಶ್ರಯದಲ್ಲಿ ತಾಲೂಕಿನ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂ ಸೇವಕರಿಗೆ ಎನ್‌ಡಿಆರ್ ವತಿಯಿಂದ ಒಂದು ದಿನದ ವಿಶೇಷ ತರಬೇತಿ ನೀಡಲಾಯಿತು.



ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ವಿಪತ್ತು ಹಾಗೂ ತುರ್ತು ಸಂದರ್ಭಗಳಲ್ಲಿ ಜನರ ನೆರವಿಗೆ ಧಾವಿಸುತ್ತಿರುವ ಶೌರ್ಯ ತಂಡಗಳ ಸೇವೆ ಶ್ಲಾಘನೀಯ. ಮುಂದಿನ ದಿನಗಳಲ್ಲಿ ತಂಡಕ್ಕೆ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದರು. ಕಮಾಂಡರ್ ಶಾಂತಿಲಾಲ್ ಜಟಿಯಾ ಮಾತನಾಡಿ, ದೇಶದ ವಿವಿಧ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದ್ದರೂ ಕರ್ನಾಟಕದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶೌರ್ಯ ತಂಡಗಳು ಗ್ರಾಮ ಮಟ್ಟದಲ್ಲಿಯೇ ಎನ್‌ಡಿಆರ್‌ಎಫ್ ಜೊತೆ ಕೈಜೋಡಿಸುತ್ತಿರುವುದು ವಿಶೇಷ. ಶೌರ್ಯ ಎಂದರೆ ಸಮಯಪ್ರಜ್ಞೆ, ಶಕ್ತಿ, ಬದ್ಧತೆ, ಪ್ರಾಮಾಣಿಕತೆ ಮತ್ತು ಸಂಯಮ ಎಂದರು.

# ವೇತನ ಬಿಡುಗಡೆಗೆ ಪ್ರತ್ಯೇಕ ಪ್ರತಿಭಟನೆ

## ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ | ಸಮಸ್ಯೆಗಳ ಮನವರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರೋಗ್ಯ ಇಲಾಖೆ ಹೊರಗುತ್ತಿಗೆ ನೌಕರರ ಪರಿಷ್ಕೃತ ವೇತನ ಜಾರಿಗೆ ಹಾಗೂ ಅಂಗನವಾಡಿ ನೌಕರರ ಬಾಕಿ ಗೌರವಧನ ವೇತನ ಬಿಡುಗಡೆಗೆ ಆಗ್ರಹಿಸಿ ನಗರದಲ್ಲಿ ಮಂಗಳವಾರ ಪ್ರತ್ಯೇಕ ಪ್ರತಿಭಟನೆಗಳು ನಡೆದವು.

ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಆರೋಗ್ಯ, ವೈದ್ಯಕೀಯ ಶಿಕ್ಷಣ ಹಾಗೂ ಆಯುಷ್ ಇಲಾಖೆಗಳ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಪರಿಷ್ಕರಿಸಲಾಗಿದ್ದ ಕನಿಷ್ಟ ವೇತನವನ್ನು ಹಿಂಪಡೆಯದೆ ಜಾರಿಗೊಳಿಸಬೇಕೆಂದು ರಾಜ್ಯ ಆರೋಗ್ಯ ಇಲಾಖೆ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘ ಒತ್ತಾಯಿಸಿತು.

ಸಂಘದ ರಾಜ್ಯಾಧ್ಯಕ್ಷ ಅಕ್ಷಯ್ ಡಿ.ಎಂ. ಗೌಡ ಮಾತನಾಡಿ, ಹೊರಗುತ್ತಿಗೆ ನೌಕರರ ಹಲವು ವರ್ಷಗಳ ಬೇಡಿಕೆಗೆ ಸ್ಪಂದಿಸಿ ಕಾರ್ಮಿಕ ಇಲಾಖೆಯು ಮೇ 22, 2026ರಂದು ಅಧಿಸೂಚನೆ ಹೊರಡಿಸಿ ಕನಿಷ್ಟ ವೇತನವನ್ನು ಪರಿಷ್ಕರಿಸಿತ್ತು. ಅದರಂತೆ ಕೆಲವು ಜಿಲ್ಲೆಗಳಲ್ಲಿ ಇಲಾಖೆಯ ಮುಖ್ಯಸ್ಥರಿಂದ ಪರಿಷ್ಕೃತ ವೇತನದ ಅನುಬಂಧ ಪಡೆದು, ಏಜೆನ್ಸಿಗಳ ಮೂಲಕ ನೌಕರರಿಗೆ ಎರಡು ತಿಂಗಳ ವೇತನ ಪಾವತಿಸಲಾಗಿದೆ. ಆದರೆ ಜು. 15ರಂದು ಆರ್ಥಿಕ ಇಲಾಖೆ ಹೊರಡಿಸಿರುವ ಅಧಿಕೃತ ಜ್ಞಾಪನದಲ್ಲಿ ಪರಿಷ್ಕೃತ ಕನಿಷ್ಟ ವೇತನ ಹಿಂಪಡೆಯುವ ನಿರ್ಧಾರ ಕೈಗೊಂಡಿರುವುದು ಸಾವಿರಾರು ಹೊರಗುತ್ತಿಗೆ ನೌಕರರ ಬದುಕಿಗೆ ಮತ್ತೊಂದು ಹೊಡೆತ ನೀಡಿದಂತಾಗಿದೆ. ಒಂದು ಕಡೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಮತ್ತೊಂದೆಡೆ ಕಡಿಮೆ ವೇತನದಲ್ಲಿ ಕುಟುಂಬ ನಿರ್ವಹಣೆ ಮಾಡಬೇಕಾದ ಅನಿವಾರ್ಯತೆ ಇರುವ ಸಂದರ್ಭದಲ್ಲಿ ಸರ್ಕಾರದ ಈ ಕ್ರಮ ಒಪ್ಪುವಂತದ್ದಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.




ವೇತನ ಪರಿಷ್ಕರಣೆ ಜಾರಿಯಾಗಲಿ. ಈಗಾಗಲೇ ಪರಿಷ್ಕೃತ ವೇತನವನ್ನು ಕೆಲವು ಕಡೆ ಪಾವತಿಸಿರುವಾಗ ಅದನ್ನು ಏಕಾಏಕಿ ಹಿಂಪಡೆಯುವ ಮೂಲಕ ನೌಕರರನ್ನು ಗೊಂದಲಕ್ಕೆ ಸಿಲುಕಿಸಲಾಗಿದೆ. ಸರ್ಕಾರ ಕೂಡಲೇ ತನ್ನ ನಿರ್ಧಾರವನ್ನು ಮರುಪರಿಶೀಲಿಸಿ ಪರಿಷ್ಕೃತ ಕನಿಷ್ಟ ವೇತನವನ್ನು ರಾಜ್ಯಾದ್ಯಂತ ಸಮರ್ಪಕವಾಗಿ ಜಾರಿಗೊಳಿಸಬೇಕು. ನೌಕರರ ಶ್ರಮಕ್ಕೆ ತಕ್ಕ ವೇತನ ದೊರೆಯುವಂತಾಗಬೇಕು ಎಂದು ಆಗ್ರಹಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ನಿರ್ದೇಶಕ ಆರ್.ಎಸ್.ರಾಜಯ್ಯ, ಜಿಲ್ಲಾಧ್ಯಕ್ಷ ಹೆಚ್. ಆರ್. ಮಂಜುನಾಥ್, ಮನು ಮಲ್ಲೇಶ್, ಕುಮಾರ್, ಲೋಕೇಶ್ ಇತರರು ಉಪಸ್ಥಿತರಿದ್ದರು.

### ಬಾಕಿ ಗೌರವಧನ ಬಿಡುಗಡೆಗೆ ಆಗ್ರಹ

ಬಾಕಿ ಇರುವ ಗೌರವಧನವನ್ನು ತಕ್ಷಣ ಬಿಡುಗಡೆ ಸೇರಿ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಎಐಟಿಯುಸಿ ಉಪಾಧ್ಯಕ್ಷೆ ಸಿ.ಆರ್. ನಾಗರತ್ನ ಮಾತನಾಡಿ, ಹೊಸ ಸರ್ಕಾರ ರಚನೆಯಾಗಿ ವಿಧಾನಸಭಾ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಬಹುಕಾಲದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಎರಡು-ಮೂರು ತಿಂಗಳಿಂದ ಬಾಕಿ ಇರುವ ಗೌರವಧನ ಬಿಡುಗಡೆ ಮಾಡಬೇಕು. ಎಸ್‌ಐಆರ್ ಸಮೀಕ್ಷೆ, ಜಾತಿ ಪ್ರಮಾಣ ಪತ್ರಗಳನ್ನು ಮನೆ-ಮನೆಗೆ ವಿತರಿಸುವುದು, ಗೃಹಲಕ್ಷ್ಮಿ ಸಮೀಕ್ಷೆ ಸೇರಿ ಅಂಗನವಾಡಿ ಕೆಲಸಕ್ಕೆ ಸಂಬಂಧಿಸದ ಹೆಚ್ಚುವರಿ ಕರ್ತವ್ಯಗಳಿಂದ ಕಾರ್ಯಕರ್ತೆಯರನ್ನು ಮುಕ್ತಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

11ನೇ ವೇತನ ಆಯೋಗದ ಶಿಫಾರಸ್ಸು, ಗ್ರಾಚ್ಯುಟಿ ಸೇರಿ ಬಾಕಿ ಇರುವ ಸೌಲಭ್ಯಗಳನ್ನು ಜಾರಿಗೊಳಿಸಬೇಕು. ಪ್ರಭಾರ ಭತ್ಯೆ ಹಾಗೂ ತುಟ್ಟಿ ಭತ್ಯೆಯನ್ನು ಹೆಚ್ಚಿಸಬೇಕು. ಮಹಿಳಾ ಕಾರ್ಯಕರ್ತೆಯರಿಗೆ ಋತುಚಕ್ರದ ರಜೆ ಹಾಗೂ ಸಂಬಳ ಸಹಿತ ವೈದ್ಯಕೀಯ ರಜೆ ನೀಡಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸಿ ನಾಲ್ಕು ವರ್ಷದೊಳಗಿನ ಮಕ್ಕಳನ್ನು ದಾಖಲಿಸಿಕೊಳ್ಳುತ್ತಿರುವುದರಿಂದ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದೆ. ಈ ಸಮಸ್ಯೆಗೆ ಸರ್ಕಾರ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದರು.

ಜೊತೆಗೆ ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಎದುರಿಸುತ್ತಿರುವ ಸ್ಥಳೀಯ ಸಮಸ್ಯೆ ಹಾಗೂ ಬೇಡಿಕೆಗಳನ್ನು ತಕ್ಷಣ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಜಿಲ್ಲಾ ಸಮಿತಿ ಅಧ್ಯಕ್ಷೆ ಎಸ್.ಎನ್.ಜಯಲಕ್ಷ್ಮಿ, ಕಾರ್ಯಾಧ್ಯಕ್ಷೆ



ಲೀನಾ ಡಯಾಸ್, ಜಿಲ್ಲಾ ಖಜಾಂಚಿ ಪಿ.ಡಿ. ನಾಗರತ್ನ, ಪ್ರಧಾನ ಕಾರ್ಯದರ್ಶಿ ಕೆ.ವೇದಾವತಿ, ಅಂಬಿಕಾ, ಜಯಲಕ್ಷ್ಮಿ ಇತರರಿದ್ದರು.

## ಪುಟ್ಬಾಲ್: ರಾಷ್ಟ್ರೀಯ ತಂಡಕ್ಕೆ ಪದ್ಮನಾಭ ಗೌಡ ಆಯ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಯುವ ಘುಟ್ಬಾಲ್ ಪ್ರತಿಭೆ ವಿ.ಎಲ್. ಪದ್ಮನಾಭ ಗೌಡ ರಾಷ್ಟ್ರೀಯ ಪುಟ್ಬಾಲ್ ತಂಡಕ್ಕೆ ಆಯ್ಕೆಯಾಗುವ ಮೂಲಕ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ತರಬೇತುದಾರ ಕೃಷ್ಣ ಅವರ ಮಹತ್ವದ ಮಾರ್ಗದರ್ಶನದಲ್ಲಿ ಈ ಸಾಧನೆ ಸಾಧ್ಯವಾಗಿದೆ. ಕಳೆದ ಆರು ವರ್ಷಗಳಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಘುಟ್ಬಾಲ್ ತರಬೇತಿ ನೀಡುತ್ತಿರುವ ಕೃಷ್ಣ ಅವರು ಹಲವಾರು ಯುವ ಪ್ರತಿಭೆಗಳನ್ನು ರೂಪಿಸಿದ್ದಾರೆ.

2024ರಲ್ಲಿ ನಡೆದ ಮಿನಿ ಒಲಿಂಪಿಕ್ಸ್‌ನಲ್ಲಿ ಪದ್ಮನಾಭ ಸ್ಪರ್ಧಿಸಿದ್ದರು. ತಂಡದ ಗೋಲ್ ಕೀಪರ್ ಆಗಿದ್ದ ಪದ್ಮನಾಭ ಗೌಡ ಫೈನಲ್ ಪಂದ್ಯದಲ್ಲಿ ಎದುರಾಳಿ ತಂಡದ ಮೂರು ಪ್ರಮುಖ ಪೆನಾಲ್ಟಿಗಳನ್ನು ತಡೆಯುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅಂದಿನಿಂದಲೇ ಪದ್ಮನಾಭ ಮುಂದೊಂದು ದಿನ ರಾಷ್ಟ್ರೀಯ ಮಟ್ಟದಲ್ಲಿ ಮಿಂಚುವ ಭರವಸೆ ಮೂಡಿಸಿದ್ದರು. ಇದೀಗ ಆ ಭರವಸೆ ನನಸಾಗಿದೆ.

ವೀರಾಪುರದ ಬಾಲಕ : ಹಾಸನ ತಾಲೂಕು ಸಾಲಗಾಮೆ ಹೋಬಳಿಯ ವೀರಾಪುರ ಗ್ರಾಮದ ವಿ.ಎಲ್. ಪದ್ಮನಾಭ ಗೌಡ ಅವರು 2011ರ ಮೇ 14ರಂದು ಜನಿಸಿದರು. ತಂದೆ ಲೋಕೇಶ್ ವಿ.ಪಿ. ಹಾಗೂ ತಾಯಿ ಹೇಮಲತಾ ಡಿ.ಟಿ. ಹಾಸನದ ಹೇಮಾವತಿ ನಗರದ ರಾಯಲ್ ಅಪೋಲೋ ಇಂಟರ್ನ್ಯಾಷನಲ್ ಶಾಲೆಯಲ್ಲಿ 1ರಿಂದ 9ನೇ ತರಗತಿವರೆಗೆ ವ್ಯಾಸಂಗ ಮಾಡಿರುವ ಅವರು, ಪ್ರಸ್ತುತ ಬೆಂಗಳೂರಿನ ಯಲಹಂಕ-ಜಕ್ಕೂರಿನ ವಿನ್ ಮೋರ್ ಅಕಾಡೆಮಿಯಲ್ಲಿ 10ನೇ ತರಗತಿ ಶಿಕ್ಷಣ ಪಡೆಯುತ್ತಿದ್ದಾರೆ. ಓದಿನ ಜೊತೆಗೆ ಘುಟ್ಬಾಲ್ ಮೇಲಿನ ಆಸಕ್ತಿಯನ್ನು ಮುಂದುವರಿಸಿರುವ ಪದ್ಮನಾಭ, ಬೆಂಗಳೂರಿನ ಸೌತ್ ಯುನೈಟೆಡ್ ಘುಟ್ಬಾಲ್ ಕ್ಲಬ್‌ನಲ್ಲಿ ವೃತ್ತಿಪರ ತರಬೇತಿ ಪಡೆಯುತ್ತಿದ್ದಾರೆ.

ಮೊದಲ ಪ್ರಯತ್ನದಲ್ಲಿಯೇ ರಾಷ್ಟ್ರೀಯ ಮಟ್ಟದ ತಂಡಕ್ಕೆ ಆಯ್ಕೆಯಾಗಿರುವುದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಪದ್ಮನಾಭನ ಸಾಧನೆಗೆ ಹಾಸನ ಘುಟ್ಬಾಲ್ ಕ್ಲಬ್ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಈ ಸಾಧನೆ ಹಾಸನ ಜಿಲ್ಲೆಯ ಉದಯೋನ್ಮುಖ ಘುಟ್ಬಾಲ್ ಆಟಗಾರರಿಗೆ ಪ್ರೇರಣೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಸೌಲಭ್ಯಗಳು ಸೀಮಿತವಾಗಿದ್ದರೂ ಛಲ, ಶ್ರಮ ಮತ್ತು ಸರಿಯಾದ ಮಾರ್ಗದರ್ಶನ ಇದ್ದರೆ ದೊಡ್ಡ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಪದ್ಮನಾಭ ತೋರಿಸಿಕೊಟ್ಟಿದ್ದಾನೆ ಎಂದು ತರಬೇತುದಾರ ಕೃಷ್ಣ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

# ಗುರು ಶಿಷ್ಯರ ಸಂಬಂಧ ಹಾಲು-ಜೇನಿನಂತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗುರು ಮತ್ತು ಭಕ್ತರ ನಡುವಿನ ಸಂಬಂಧ ಹಾಲು-ಸಕ್ಕರೆಯಂತೆ ಶ್ರೇಷ್ಠ. ಹಾಲಿನಲ್ಲಿ ಸಕ್ಕರೆ ಬೆರೆತಾಗ ಅದರ ಸಿಹಿ ಹರಡುವಂತೆ ಗುರುಗಳ ಮಾರ್ಗದರ್ಶನ ಮತ್ತು ಭಕ್ತರ ನಿಷ್ಠೆ ಒಂದಾದಾಗ ಉತ್ತಮ ಸಂಸ್ಕಾರ, ಸದಾಚಾರ ಹಾಗೂ ಧಾರ್ಮಿಕ ಮೌಲ್ಯಗಳು ಬೆಳೆಯಲು ಸಾಧ್ಯವಾಗುತ್ತದೆಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಜವನೇಹಳ್ಳಿ ಮಠದಲ್ಲಿ ನಡೆದ ತ್ರಿಮೂರ್ತಿ ಗದ್ದುಗೆ ಸ್ಮರಣೋತ್ಸವದಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಗುರು-ಶಿಷ್ಯರ ಪರಂಪರೆಗೆ ವಿಶಿಷ್ಟ ಸ್ಥಾನವಿದೆ. ಗುರುಗಳು ಕೇವಲ ಧಾರ್ಮಿಕ ಬೋಧನೆ ಮಾಡುವವರಲ್ಲ, ಸಮಾಜವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸುವ ಮಾರ್ಗದರ್ಶಕರು ಮತ್ತು ಸಂಸ್ಕಾರದ ದೀಪ ಬೆಳಗಿಸುವ ಶಕ್ತಿ ಎಂದರು.

ಗುರು ಮತ್ತು ಭಕ್ತರ ನಡುವೆ ಪರಸ್ಪರ ವಿಶ್ವಾಸ, ಗೌರವ ಹಾಗೂ ಆತ್ಮೀಯತೆ ಇರಬೇಕು. ಭಕ್ತರು ಕೇವಲ ಸಂಕಷ್ಟದ ಸಂದರ್ಭದಲ್ಲಿ ಮಾತ್ರ ದೇವರು ಮತ್ತು ಗುರುಗಳನ್ನು ನೆನೆಯದೆ,



ಜೀವನದ ಪ್ರತಿಯೊಂದು ಹಂತದಲ್ಲೂ ಧರ್ಮ, ಸಂಸ್ಕಾರ ಮತ್ತು ಸತ್ಪಥದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಮಾನವ ಜೀವನ ಸಾರ್ಥಕವಾಗಲು ಸಾಧ್ಯವೆಂದರು.

ಇಂತಹ ಪವಿತ್ರ ಸ್ಥಳಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿ ಮಾತ್ರವಲ್ಲದೆ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಕಾಲ ಬದಲಾದರೂ ನಮ್ಮ ಧಾರ್ಮಿಕ ಪರಂಪರೆ, ಮಠ-ಮಂದಿರಗಳ ಮೇಲಿನ ಭಕ್ತಿ ಹಾಗೂ ಹಿರಿಯರು ಹಾಕಿಕೊಟ್ಟಿರುವ ಸಂಸ್ಕಾರದ ಹಾದಿಯನ್ನು ಮುಂದುವರಿಸಿಕೊಂಡು ಹೋಗುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಮಠ ಮತ್ತು ಮಂದಿರಗಳ ಅಭಿವೃದ್ಧಿಗೆ ಸಮಾಜದ ಸಹಕಾರ ದೊರೆತಾಗ ಮಾತ್ರ ಕ್ಷೇತ್ರಗಳು ಮತ್ತಷ್ಟು ಬಲಿಷ್ಟವಾಗಿ ಬೆಳೆಯಲು ಸಾಧ್ಯ. ಭಕ್ತರು ದೇಣಿಗೆ, ಸೇವೆ, ಶ್ರಮದಾನ ಸೇರಿ ವಿವಿಧ ರೀತಿಯಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು. ಹಿರಿಯರು ಮಕ್ಕಳಿಗೆ ನಮ್ಮ ಪರಂಪರೆ, ಧಾರ್ಮಿಕ ಆಚರಣೆ ಹಾಗು ಗುರು-ಹಿರಿಯರಿಗೆ ಗೌರವ ನೀಡುವ ಸಂಸ್ಕಾರವನ್ನು ಕಲಿಸಬೇಕು. ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳು ಈ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಜವೇನಹಳ್ಳಿ ಮಠದ ಸಂಗಮೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ತ್ರಿಮೂರ್ತಿ ಗದ್ದುಗೆ ಸ್ಮರಣೋತ್ಸವ ಅಂಗವಾಗಿ ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಭಕ್ತರ ಸಮಾಗಮ ನಡೆಯಿತು. ದಾಸೋಹದ ವ್ಯವಸ್ಥೆಯನ್ನು ಪುನಿತ್ ಪಟೇಲ್ ನೆರವೇರಿಸಿದರು.

ಕಲ್ಮಠ ಕಂಪ್ಲಿ ಮಠದ ಅಭಿನವ ಪ್ರಭು ಸ್ವಾಮೀಜಿ, ರೇವಣ ಸಿದ್ದೇಶ್ವರ ಸ್ವಾಮೀಜಿ, ಜಯಾನಂದ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಎಂಸಿಇ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಆರ್. ಗುರುದೇವ್, ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ, ಜವೇನಹಳ್ಳಿ ಮಠದ ಹಿತಾರಕ್ಷಣಾ ಸಮಿತಿ ಅಧ್ಯಕ್ಷ ಬಿ.ವಿ. ಉಮೇಶ್, ಕಾರ್ಯದರ್ಶಿ ಪರಮೇಶ್, ಸಹಕಾರ್ಯದರ್ಶಿ ಕಟ್ಟಾಯ ಶಿವಕುಮಾರ್, ಕಂಚಮಾರನಹಳ್ಳಿ ಕಾಂತರಾಜ್ ಮತ್ತಿತರರಿದ್ದರು.

# ಮಲ್ನಾಡ್ ಪ್ರಾಥಮಿಕ ಶಾಲೆಗೆ ಸಮಗ್ರ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕಿನ ಅರೇಹಳ್ಳಿಯ ಮಲ್ನಾಡ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ತಾಲ್ಲೂಕು ಕ್ರೀಡಾಂಗಣದಲ್ಲಿ 2026-27ನೇ ಸಾಲಿನ ಅರೇಹಳ್ಳಿ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ನಡೆಯಿತು.

ಕ್ರೀಡಾಕೂಟದಲ್ಲಿ ಮಲ್ನಾಡ್ ಹಿರಿಯ ಪ್ರಾಥಮಿಕ ಶಾಲೆಯು ಸಮಗ್ರ ಪ್ರಶಸ್ತಿಗೆ ಭಾಜನವಾಯಿತು. ಜೊತೆಗೆ ಬಾಲಕರ ಚಾಂಪಿಯನ್, ಬಾಲಕಿಯರ ಚಾಂಪಿಯನ್, ಬಾಲಕರ ವೈಯಕ್ತಿಕ ಚಾಂಪಿಯನ್ ಹಾಗೂ ಬಾಲಕಿಯರ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಗಳನ್ನು ಗೆದ್ದು ಬೀಗಿತು.

ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶಾಲೆಯ ಆಡಳಿತ ಮಂಡಳಿ ಸದಸ್ಯರು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದಿಸಿದರು.

ಪ್ರಶಸ್ತಿಯ ವಿವರ:

ಬಾಲಕರ ವಿಭಾಗದಲ್ಲಿ ಸಂಜಯ್ 100 ಮೀ. ಓಟ (ಪ್ರಥಮ), ಡಿಸ್ಕಸ್ ಥ್ರೋ (ಪ್ರಥಮ), ಗುಂಡು ಎಸೆತ (ಪ್ರಥಮ) ವೈಯಕ್ತಿಕ ಚಾಂಪಿಯನ್, ಖಲಂದರ್ ಶಾಹಿದ್ 600 ಮೀ. ಓಟ (ಪ್ರಥಮ), ಡಿಸ್ಕಸ್ ಥ್ರೋ (ದ್ವಿತೀಯ), ಉದ್ದ ಜಿಗಿತ (ಪ್ರಥಮ), ಮದನ್ 400 ಮೀ. ಓಟ (ದ್ವಿತೀಯ), ಉದ್ದ ಜಿಗಿತ (ತೃತೀಯ), ಹುಜೈರ್ 100 ಮೀ. ಓಟ (ಪ್ರಥಮ), 200 ಮೀ. ಓಟ (ತೃತೀಯ), ಸೈಯ್ಯದ್ ಮೊಹಸಿನ್ ಷಾ ಹುಸೇನ್ 600 ಮೀ. ಓಟ (ತೃತೀಯ), ಮೋಕ್ಷಿತ್ ಗುಂಡು ಎಸೆತ (ತೃತೀಯ), ಹರ್ಷಿತ್ ಎತ್ತರ ಜಿಗಿತ (ತೃತೀಯ)ದಲ್ಲಿ ಬಹುಮಾನ ಪಡೆದರು.

ಗುಂಪು ಆಟಗಳು: ಕಬಡ್ಡಿ ಪ್ರಥಮ, ರಿಲೇ ಪ್ರಥಮ.

ಬಾಲಕಿಯರ ವಿಭಾಗ: ಸಂಯುಕ್ತ 200 ಮೀ. ಓಟ (ದ್ವಿತೀಯ), ಉದ್ದ ಜಿಗಿತ (ಪ್ರಥಮ)

ನೂರ್ ಜೋಯಾ ಗುಂಡು ಎಸೆತ (ಪ್ರಥಮ), ಡಿಸ್ಕಸ್ ಥ್ರೋ (ಪ್ರಥಮ), ಆಫ್ರಾ ಎತ್ತರ ಜಿಗಿತ (ದ್ವಿತೀಯ), ಫಾತಿಮಾ ಜೋಹ್ರಾ ಬಿ ಡಿಸ್ಕಸ್ ಥ್ರೋ (ದ್ವಿತೀಯ), ಮೈನಾ ಶೀತಲ್ ಉದ್ದ ಜಿಗಿತ (ತೃತೀಯ) ಗುಂಪು ಆಟಗಳು: ರಿಲೇ ದ್ವಿತೀಯ, ವಾಲಿಬಾಲ್ ಪ್ರಥಮ, ಥ್ರೋಬಾಲ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

# ದೃಷ್ಟಿ ದೋಷವುಳ್ಳವರಿಗೆ ಕನ್ನಡಕ ವಿತರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮನುಷ್ಯನ ಕಣ್ಣು ಬೆಳಕನ್ನು ನೀಡುತ್ತದೆ. ಕಣ್ಣಿನ ಸುರಕ್ಷತೆ ಬಹಳ ಮುಖ್ಯ ಎಂದು ತಾಲೂಕು ರೆಡ್ ಕ್ರಾಸ್ ಸಭಾಪತಿ ಕೆ.ಎನ್. ಕಾಂತರಾಜು ತಿಳಿಸಿದರು.

ಮಗ್ಗೆ ಗ್ರಾಮದಲ್ಲಿ ಭಾರತೀಯ ರೆಡ್ ಕ್ರಾಸ್ ಘಟಕ, ಲಯನ್ಸ್ ಸೇವಾ ಸಂಸ್ಥೆ ಮಗ್ಗೆ-ರಾಯರ ಕೊಪ್ಪಲು ಘಟಕ ಹಾಗೂ ಮೈಸೂರಿನ ಎ.ಎಸ್.ಜಿ ಕಣ್ಣಿನ ಆಸ್ಪತ್ರೆ ವತಿಯಿಂದ ದೃಷ್ಟಿ ದೋಷವುಳ್ಳವರಿಗೆ ಕನ್ನಡಕ ವಿತರಿಸಿ ಮಾತನಾಡಿ, ಕಳೆದ 15 ದಿನಗಳ ಹಿಂದೆ ಮಗ್ಗೆ ಗ್ರಾಮದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ದೂರ ಮತ್ತು ಸಮೀಪ ದೃಷ್ಟಿ ದೋಷವುಳ್ಳ 150 ಜನರನ್ನು ಗುರುತಿಸಲಾಗಿತ್ತು. ಈಗ ಅವರಿಗೆ ಕನ್ನಡಕ ವಿತರಿಸಲಾಗುತ್ತಿದೆ.

ಅಂದು ನಡೆದ ಉಚಿತ ಕಣ್ಣಿನ ತಪಾಸಣೆಯ ಶಿಬಿರದಲ್ಲಿ 300ಕ್ಕೂ ಹೆಚ್ಚಿನ ಸಾರ್ವಜನಿಕರು ತಮ್ಮ ಕಣ್ಣುಗಳನ್ನು ತಪಾಸಣೆಗೆ ಒಳಪಡಿಸಿಕೊಂಡಿದ್ದರು. ಅದರಲ್ಲಿ ಸಮೀಪ ದೃಷ್ಟಿ ದೋಷವುಳ್ಳ 150ಕ್ಕೂ ಹೆಚ್ಚು ಜನರಿಗೆ ಸ್ಥಳದಲ್ಲಿಯೇ ಉಚಿತ ಕನ್ನಡಕಗಳನ್ನು ವಿತರಿಸಲಾಗಿತ್ತು ಎಂದರು.

ಎ.ಎಸ್.ಜಿ ಕಣ್ಣಿನ ಆಸ್ಪತ್ರೆ ಸೀನಿಯರ್ ಸೇಲ್ ಎಕ್ಸಿಕ್ಯೂಟಿವ್ ಮುಷವಿರ್ ಪಾಷ ಮಾತನಾಡಿ, ಕೆಲವರು ಕಣ್ಣಿನ ಸಣ್ಣಪುಟ್ಟ ಸಮಸ್ಯೆಗಳನ್ನು ನಿರ್ಲಕ್ಷಿಸಿ ದೊಡ್ಡ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಟಿಕ ಆಹಾರ ವಿಟಮಿನ್ ಟಿಎಟಿ ಇರುವ ತರಕಾರಿ, ಕ್ಯಾರೆಟ್, ಸೊಪ್ಪು ಇತ್ಯಾದಿಗಳನ್ನು ಸೇವಿಸಬೇಕು.

ಕಣ್ಣಿಗೆ ಯಾವುದೇ ತೊಂದರೆ ಕಂಡುಬಂದ ಕೂಡಲೇ ನಿರ್ಲಕ್ಷ್ಯ ಮಾಡದೆ ವೈದ್ಯರನ್ನು ಸಂಪರ್ಕಿಸಬೇಕು. ನಮ್ಮ ಸಾವಿನ ನಂತರವೂ ನೇತ್ರದಾನದ ಮೂಲಕ ಮತ್ತೊಬ್ಬರ ಜೀವನಕ್ಕೆ ಬೆಳಕಾಗುವ ಸತ್ಕಾರ್ಯದಲ್ಲಿ ನಾವು ಭಾಗಿಯಾಗುವ ಅವಕಾಶವಿದೆ ಎಂದರು.

ರೆಡ್ ಕ್ರಾಸ್ ಸಭಾಪತಿ ಕೆ.ಎನ್. ಕಾಂತರಾಜು, ಕಾರ್ಯದರ್ಶಿ ವೀರಭದ್ರಸ್ವಾಮಿ, ಉಪ ಸಭಾಪತಿ ಶಶಿಧರ್ ಬೆಕ್ಕಡಿ, ಪದಾಧಿಕಾರಿಗಳಾದ ಅಜರುದ್ದೀನ್, ಪ್ರವೀಣ್, ಧರ್ಮರಾಜು ಭರತ್ತೂರು, ಲಯನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ಸುನಿಲ್ ಗಾಣಿಗೆರೆ, ವಲಯ ಅಧ್ಯಕ್ಷ ರಘು ಪಾಳ್ಯ, ಕಾರ್ಯದರ್ಶಿ ರವಿ ಮಾದಿಹಳ್ಳಿ, ಖಜಾಂಚಿ ರವಿ ನೀಡುಗರಹಳ್ಳಿ, ಮಾಜಿ ಅಧ್ಯಕ್ಷರುಗಳಾದ ಚನ್ನಕೇಶವ, ರಾಜಕುಮಾರ್, ಎಚ್.ಎನ್ ರಮೇಶ್ ಮತ್ತು ಸದಸ್ಯರು, ಶಿಬಿರದ ವೈದ್ಯರಾದ ಡಾ.ವಿಮಲಾ, ಟೆಕ್ನಿಷಿಯನ್ ಶ್ರೀಧರ್ ಪಾಟೀಲ್ ಉಪಸ್ಥಿತರಿದ್ದರು.

# ಮತದಾರರ ಪಟ್ಟಿಯಲ್ಲಿ ಹೆಸರು ಖಚಿತಪಡಿಸಿಕೊಳ್ಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ವಿಧಾನಸಭಾ ಕ್ಷೇತ್ರದ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ಪ್ರತಿಯೊಬ್ಬ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಕೆ.ಸಿ. ಸೌಮ್ಯ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಎಸ್ಐಆರ್ (ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ) ಕುರಿತು ಮಾಹಿತಿ ನೀಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಅಂತಿಮ ಹಂತ ತಲುಪಿದೆ. ಕರಡು ಪಟ್ಟಿಗೆ ಸೆ. 24ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದ್ದು, ಸ್ವೀಕೃತ ಆಕ್ಷೇಪಣೆಗಳನ್ನು ಪರಿಶೀಲಿಸಿ ಚುನಾವಣಾ ಆಯೋಗದ ನಿರ್ದೇಶನದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದರು.

ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,36,667 ಮತದಾರರಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಶೇ. 100ರಷ್ಟು ಗಣತಿ ನಮೂನೆಗಳನ್ನು ಸರಬರಾಜು ಮಾಡಲಾಗಿದೆ. ಜೂ. 30ರಿಂದ ಆ. 30ರ ವರೆಗೆ ಮನೆಮನೆಗೆ ಭೇಟಿ ನೀಡಿ ಗಣತಿ ನಮೂನೆಗಳ ವಿತರಣೆ ಹಾಗೂ ಗಣಕೀಕರಣ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಒಟ್ಟು 2,13,809 ಗಣತಿ ನಮೂನೆಗಳನ್ನು ವಿತರಿಸಲಾಗಿದ್ದು, ಆನ್‌ಲೈನ್ ಮೂಲಕ 353 ಗಣತಿ ನಮೂನೆಗಳು ಸ್ವೀಕೃತವಾಗಿವೆ ಎಂದು ತಿಳಿಸಿದರು.

ಪರಿಶೀಲನಾ ಕಾರ್ಯದಲ್ಲಿ 752 ಗೈರು ಹಾಜರಿರುವ ಮತದಾರರು, 9,163 ಶಾಶ್ವತವಾಗಿ ವಲಸೆ ಹೋಗಿರುವ ಮತದಾರರು, 10,594 ಮೃತಪಟ್ಟ ಮತದಾರರು, 2,298 ಪುನರಾವರ್ತಿತ ಮತದಾರರು ಹಾಗೂ ಇತರ ಕಾರಣಗಳಿಂದ 51 ಮತದಾರರನ್ನು ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕ್ಷೇತ್ರದಲ್ಲಿ ಒಟ್ಟು 283 ಮತಗಟ್ಟೆಗಳಿದ್ದು, 1,200ಕ್ಕಿಂತ ಹೆಚ್ಚು ಮತದಾರರಿರುವ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ 9 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆಗೆ ಅ.1 ಅರ್ಹತಾ ದಿನಾಂಕವಾಗಿದ್ದು, ಅರ್ಹ ಮತದಾರರು ತಮ್ಮ ಹೆಸರು ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದನ್ನು ಪರಿಶೀಲಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಮನವಿ ಮಾಡಿದರು.

ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ಹೆಸರು ತೆಗೆದು ಹಾಕುವಿಕೆ ಸೇರಿದಂತೆ ಅಗತ್ಯವಿರುವ ಹಕ್ಕು ಮತ್ತು ಆಕ್ಷೇಪಣೆಗಳನ್ನು ನಿಗದಿತ ನಮೂನೆಗಳಲ್ಲಿ ಸಲ್ಲಿಸಬಹುದಾಗಿದೆ. ಎಸ್ಐಆರ್ ಕಾರ್ಯದಲ್ಲಿ ಎಲ್ಲ ಬಿಎಲ್‌ಒಗಳು ಹಾಗೂ ಸಿಬ್ಬಂದಿ ಕ್ರಮಬದ್ಧವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಕೆ.ಸಿ. ಸೌಮ್ಯ ತಿಳಿಸಿದರು.

ನಗರ ಕೋಶಾಧಿಕಾರಿ ರುದ್ರಮಣಿ, ಚುನಾವಣಾ ಶಿರಸ್ತೇದಾರ್ ಕಿರಣ್ ಹಾಗೂ ಬಿಎಲ್‌ಒಗಳು ಉಪಸ್ಥಿತರಿದ್ದರು.

# ಪರಿಸರ ಸ್ನೇಹಿ ಗಣೇಶ ಮೂರ್ತಿಗೆ ಆದ್ಯತೆ ನೀಡಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗಣೇಶೋತ್ಸವ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶ ಮೂರ್ತಿಗಳನ್ನು ಸಂಪೂರ್ಣ ನಿಷೇಧಿಸಬೇಕೆಂದು ಜಿಲ್ಲಾ ಗಣೇಶ ಮೂರ್ತಿ ಮಾರಾಟಗಾರರ ಸಂಘದಿಂದ ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಕುಂಬಾರ ಸಂಘದ ಯುವ ಘಟಕದ ಅಧ್ಯಕ್ಷ ತಿಮ್ಮಪ್ಪಶೆಟ್ಟಿ ಮಾತನಾಡಿ, ಪಿಒಪಿ ಗಣೇಶ ಮೂರ್ತಿಗಳನ್ನು ಕೆರೆ,



ನದಿ ಸೇರಿ ವಿವಿಧ ಜಲಮೂಲಗಳಲ್ಲಿ ವಿಸರ್ಜನೆ ಮಾಡುವುದರಿಂದ ಅವುಗಳು ಸುಲಭವಾಗಿ ಕರಗುವುದಿಲ್ಲ. ಅದರಿಂದ ನೀರಿನ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿ ಜಲಮೂಲಗಳ ಪರಿಸರ ವ್ಯವಸ್ಥೆಗೆ ಹಾನಿಯಾಗುವ ಸಾಧ್ಯತೆ ಇದೆ. ಜಲಚರಗಳಿಗೂ ತೊಂದರೆಯಾಗುವ ಆತಂಕವಿದೆ ಎಂದರು.

ಈ ಹಿನ್ನೆಲೆಯಲ್ಲಿ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳ ಬಳಕೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಪಿಒಪಿ ಗಣೇಶ ಮೂರ್ತಿಗಳ ತಯಾರಿಕೆ, ಸಾಗಣೆ ಹಾಗೂ ಮಾರಾಟಕ್ಕೆ ಅನುಮತಿ ನೀಡಬಾರದು ಎಂದು ಆಗ್ರಹಿಸಿದರು.

ಸಂಘದ ರಮೇಶ್, ದಿಲೀಪ್, ಹೇಮಂತ್, ಗಂಗಾಧರ್ ಇತರರು ಉಪಸ್ಥಿತರಿದ್ದರು.

# ಉಪನ್ಯಾಸಕ ಆತ್ಮಹತ್ಯೆಗೆ ಶರಣು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕ ನೇಣಿಗೆ ಶರಣಾಗಿರುವ ಘಟನೆ ನಡೆದಿದೆ.

ರಾಮನಾಥಪುರ ಹೋಬಳಿ ಶಿರದನಹಳ್ಳಿ ಗ್ರಾಮದ ಬಾಬುವರ್ಧನ್ (47) ಮೃತರು. ರಾಮನಾಥಪುರದಲ್ಲಿ ಹೊಸ ಮನೆ ನಿರ್ಮಿಸಿದ್ದ ಬಾಬುವರ್ಧನ್ ಎರಡು ತಿಂಗಳ ಹಿಂದಷ್ಟೇ ಗೃಹ ಪ್ರವೇಶ ಕಾರ್ಯ ಮುಗಿಸಿದ್ದರು. ಸೋಮವಾರ ಮಧ್ಯಾಹ್ನ ಹೊಸ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಕೊಣನೂರು ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಿತು.

ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಉಪನ್ಯಾಸಕರಾಗಿದ್ದ ಬಾಬುವರ್ಧನ್ ಅವರು ಅನೇಕ ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವಾಗಿದ್ದಾರೆ. ಇಂಗ್ಲಿಷ್ ವಿಷಯ ಬೋಧನೆಯಲ್ಲಿ ಪರಿಣತರಾಗಿದ್ದರು. ಆದರೆ ಕಳೆದ ಕೆಲ ದಿನಗಳ ಹಿಂದೆ ನಡೆದ ಅಹಿತಕರ ಘಟನೆಯಿಂದ ಅವರು ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ. ಪ್ರಕರಣ ಕುರಿತು ಕೊಣನೂರು ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದಾರೆ.

# ಇತಿಹಾಸದಲ್ಲಿ ಈ ದಿನ




## ಆಗಸ್ಟ್-26

1789: ಫ್ರಾನ್ಸ್‌ನಲ್ಲಿ ಮಾನವ ಮತ್ತು ನಾಗರಿಕರ ಹಕ್ಕುಗಳ ಘೋಷಣೆ ಅಂಗೀಕರಿಸಲಾಯಿತು. ಸ್ವಾತಂತ್ರ್ಯ, ಸಮಾನತೆ ಮತ್ತು ಮೂಲಭೂತ ಹಕ್ಕುಗಳ ಪರಿಕಲ್ಪನೆಗೆ ಇದು ಮಹತ್ವದ ಹೆಜ್ಜೆಯಾಯಿತು.

1883: ಇಂಡೋನೇಷ್ಯಾದ ಕ್ರಕಟೋವಾ ಜ್ವಾಲಾಮುಖಿಯ ಭೀಕರ ಸ್ಫೋಟ ಸಂಭವಿಸಿತು. ನಂತರದ ದಿನಗಳಲ್ಲಿ ಸಂಭವಿಸಿದ ಸ್ಫೋಟಗಳು ಮತ್ತು ಸುನಾಮಿಯಿಂದ ಅಪಾರ ಜೀವಹಾನಿ ಸಂಭವಿಸಿತು.

1920: ಅಮೆರಿಕ ಸಂವಿಧಾನದ 19ನೇ ತಿದ್ದುಪಡಿ ಜಾರಿಗೆ ಬಂದು, ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು.

### ಮರಣ

1974: ಚಾರ್ಲ್ಸ್ ಲಿಂಡ್ಬರ್ಗ್, ಅಮೆರಿಕದ ಪ್ರಸಿದ್ಧ ವೈಮಾನಿಕ

# ಮುತ್ತಜ್ಜಿ-4

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-57**

ಮುತ್ತಜ್ಜಿ ನಿಧಾನವಾಗಿ ಚೇತರಿಸಿಕೊಳ್ಳಲಾರಂಬಿಸಿತು. ಒಂದು ತಿಂಗಳೊಳಗೆ ಮೊದಲಿನಂತೆ ಗೋಡೆ ಒರಗುವ, ಹೇನು ನೋಡುವ, ಎಲೆಯಡಿಕೆ ಜಗಿಯುವ ಅಜ್ಜಿಯಾಯ್ತು. ವಿಶೇಷವೆಂದರೆ ಈ ಅಜ್ಜಿ ಎಲ್ಲಾ ಅಜ್ಜಿಯರಂತೆ ಕಥೆ ಹೇಳ್ತಿರಲಿಲ್ಲ. ಸಮಯಕ್ಕೆ ಸರಿಯಾಗಿ ಊಟಮಾಡಿ ತನ್ನ ಪಾಡಿಗೆ ಗೋಡೆ ನೋಡ್ತಾ ಕೂರ್ತಿತ್ತು. ದಿವಾಕರನೊಬ್ಬನೇ ಅಜ್ಜಿಗೆ ಸದಾ ಒಡನಾಡಿ, ಅದರ ಬೇಕು-ಬೇಡಗಳನ್ನಾತನ ಮಟ್ಟದಲ್ಲಿ ಪೂರೈಸುತ್ತಿದ್ದ ಏಕೈಕ ಸಂಗಾತಿ. ಇದೆಲ್ಲದರ ಹಿಂದೆ ಆತನ ಹಿತಾಸಕ್ತಿ ಇದ್ದೇ ಇತ್ತು. ಒಂದು ದಿನ ಅತೀ ಪ್ರೀತಿಯನ್ನು ತೋರಿಸಲು ಅಜ್ಜಿ ಸೀರೆಯನ್ನು ಇಸ್ತ್ರಿ ಮಾಡ್ತೀನೀಂತ ಹೋಗಿ ಸುಟ್ಟುಹಾಕಿ, ಅದು ಕಾಣದಂತೆ ಒಳಕ್ಕೆ ಮಡಿಸಿಟ್ಟಿದ್ದ.

ಸುಂದ್ರೇಶ ಅವತ್ತು ಸಾಯಂಕಾಲ ಬಂದವನೇ, ಪಡಿಬೇರಿ ಅಂಗ್ಡಿಗೆ ಹೊಸಾರೀತಿಯ ಅನಾರ್ಕಲಿ ಅನ್ನೋ ತಿಂಡಿ ಬಂದಿದೆ, ಒಂದಕ್ಕೆ ಹತ್ತು ಪೈಸೆ ಎಂದ. ಮನೇಲಿ ಏನೇ ತಿಂಡಿ ಮಾಡಿದರೂ ಅಂಗ್ಡೀಲಿ ದುಡ್ಡು ಕೊಟ್ಟು ತಿನ್ನೋ ಮಜಾ ಬರ್ತಿರಲಿಲ್ಲವಾದ್ದರಿಂದ ಒಂದು ಕೈ ನೋಡೋಣವೆಂದುಕೊಂಡು ಹಣಕ್ಕೆ ಹೊಂಚುಹಾಕತೊಡಗಿದ. ಗೋಲಿ ಘಟನೆಯ ನಂತರ ಅಮ್ಮನ ಮುಖವನ್ನೂ, ಸಾಸಿವೆ ಡಬ್ಬವನ್ನಿಡುವ ಹಲಗೆಯನ್ನು ನೋಡುವ ಧೈರ್ಯವೇ ಅವನಿಗಿರಲಿಲ್ಲ. ಅಪರಾಧೀ ಪ್ರಜ್ಞೆ ಕಿತ್ತು ತಿನ್ನುತ್ತಿತ್ತು. ಇನ್ನು ಅಪ್ಪಯ್ಯನ ಹತ್ತಿರ ಕೇಳೋಣವೆಂದರೆ ಅವ್ರಿನ್ನೂ ಮನೆಗೆ ಬಂದಿಲ್ಲ. ಸೀದಾ ಅಜ್ಜಿ ಹತ್ತಿರ ಹೋದ. ಎಲೆ ತರ್ಬೇಕಾ? ಎಂದೆ, ಬೇಡಾ ತಂದಿದ್ದೇ ಇದೆಟಿ, ಅಡಿಕೆ ಮುಗಿದಿದೆ ಎಂದಿದ್ದೆಯಲಟಿ, ಬೆಳಿಗ್ಗೆ ಕಮ್ಲಾಕ್ಷಿ ಸುಮಾರು ಕೊಟ್ಟಿದಾಳೆ ಏನಪ್ಪಾ ಮಾಡೋದು ಎಂದು ಕಡೆಯ ಅಸ್ತ್ರವಾಗಿ ಅಜ್ಜೀ ನನಗೊಂದು ಐವತ್ತು ಪೈಸೆ ಬೇಕಿತ್ತು ಎಂದ, ಅಯ್ಯೋ ಹೋಗ್ ಮಗಾ ಇವತ್ತಿಲ್ಲ ನಾಳೆನೋ ನಾಡಿದ್ದೋ ಕೊಡ್ತೀನಿ ಎಂದಿತು. ಎಂಟು ಗಂಟೆಗೆ ಪಡಿಬೇರಿ ಅಂಗಡಿ ಬಾಗಿಲ್ಹಾಕ್ತಾನೆ. ಅಷ್ಟರೊಳಗೆ ತಿನ್ನಬೇಕು ಎಂದುಕೊಳ್ಳುತ್ತಾ ಆಚೀಚೆ ತಿರುಗಾಡಿ ಕಾಲಹರಣ ಮಾಡ್ತಿರುವಾಗ, ಅಜ್ಜಿ ಹೆಚಿಚ್ನಾಂಶ ಮೂತ್ರ ಮಾಡಲು ಎಂದು ಕಾಣುತ್ತೆ ಎದ್ದು ಹೋಗಲು ಪ್ರಯತ್ನಿಸುತ್ತಿರುವಾಗ ಶೀಲಕ್ಕ ಬಂದು ಅಜ್ಜಿಯ ಭುಜ ಹಿಡಕೊಂಡು ನಡೆಸಿಕೊಂಡು ಹೋದಳು. ಅಜ್ಜಿಯ ಎಲೆಯಡಿಕೆ ಚೀಲ ಅಲ್ಲೇ ಮೂಲೆಯಲ್ಲಿತ್ತು, ಇನ್ನು ತಡಮಾಡಬಾರದು ಎಂದು ಸೀದಾ ಹೋಗಿ



ಅದರ ಲಾಡಿಯನ್ನು ಬಿಚ್ಚಿ ಒಂದೊಂದೇ ಪದರದೊಳಗೆ ಕಯ್ಯಾಡಿಸಿದ. ಒಂದರಲ್ಲಿ ಇಪ್ಪತ್ತು ಪೈಸೆ, ಇನ್ನೊಂದಕ್ಕೆ ಕೈ ಹಾಕಿದಾಗ ಕಿವಿ ಸ್ವಚ್ಛಗೊಳಿಸುವ ಗುಗ್ಗೆ ಕಡ್ಡಿ ಸೆಟ್ಟನಲ್ಲಿದ್ದ ಚೂಪಾದ ಮುಳ್ಳು ಕೈಗೆ ಚುಚ್ಚಿ ರಕ್ತ ಬಂದುಬಿಡಬೇಕೇ? ಯಾರಾದರೂ ಬಂದರೆ ಕಥೆ ಅಷ್ಟೇ ಎಂದುಕೊಂಡು ಗಡಿಬಿಡಿಯಲಿ ಉಳಿದ ಪದರಗಳನ್ನು ಜಾಲಾಡಿಸಿದಾಗ ಒಟ್ಟು ಎಪ್ಪತ್ತು ಪೈಸೆ ಸಿಕ್ಕಿತು.

ಕೂಡಲೇ ಚೀಲವನ್ನು ಮೊದಲಿನಂತೆಯೇ ಸುತ್ತಿಟ್ಟು ಓಡಿದ. ಪಡಿಬೇರಿ ಟೀ ಕಾಯಿಸ್ತಾ ಗಿರಾಕಿಗಳೊಡನೆ ಪಣ್‌ಕಟ್ ಹೊಡೀತಿದ್ದ. ಅನಾರ್ಕಲಿ ಎಂದರೆ ಹೇಗಿರುತ್ತೆ ಎಂದು ನೋಡುವ ಗಡಿಬಿಡಿಯಲ್ಲಿ ಎಪ್ಪತ್ತು ಪೈಸೇನೂ ಕೊಟ್ಟು, ಎಂಟಾಣೆಯ ಅನಾರ್ಕಲೀಯನ್ನು ತಗೊಂಡು ಬರುವಾಗ ಬೇರಿ ಬಾರೋ ತಗಳೋ ಎಂದು ಕೂಗಿ ಕರೆದ. ಇಪ್ಪತ್ತು ಪೈಸೆ ವಾಪಾಸ್ ಕೊಡ್ತಾ ಇನ್ನೇನಾದ್ರೂ ಬೇಕಿತ್ತಾ? ಎಂದ. ಬೇಡ ಎನ್ನುತ್ತಾ ಇಪ್ಪತ್ತು ಪೈಸೆ ಬೋನಸ್ ಸಿಕ್ಕಿತಲ್ಲಾ ಎಂದು ಖುಷಿಪಡ್ತಾ ಓಡಿಬಂದ. ಪಾಪ ಪಡಿಬೇರಿಗೆ ಹೆಂಡತಿ-ಮಕ್ಕಳೆಲ್ಲಾ ಮೋಸಮಾಡಿ, ಹೊಡೆದು ಮನೆಯಿಂದ ಹೊರಗಟ್ಟಿದ್ದರೂ ಈ ಇಪ್ಪತ್ತು ಪೈಸೆ ಸಹಾ ಅನ್ಯಾಯವಾಗಿ ಬೇಡ.

ತಿಂದು ಮುಗಿಸಿದ ಮೇಲೆ ಮನೆಗೆ ಬಂದ. ಅಜ್ಜಿ ಇವನನ್ನೇ ಕಾಯ್ತ ಕೂತಿದ್ದಂತೆ ಕಾಣಿಸಿತು. ದಿವಾಕರನಿಗೆ ಬೆವರು ಬರಲು ಶುರುವಾಯ್ತು. ಮಗಾ ಬಾಯಿಲ್ಲಿ ಕಾಚು ಮುಗಿದು ಹೋಗಿದೆ, ತಗಂಬಾ, ಇಗಾ ಕಾಸು ಎಂದು ಕರೆದು ಚೀಲದ ಪದರಗಳ ಒಳಗೆ ಕೈಯಾಡಿಸಲು ಶುರುಮಾಡಿತು. ಹೇಳುವುದಾದರೂ ಹೇಗೆ? ಅದರಲ್ಲಿ ಏನೂ ಇಲ್ಲ ಎಂದು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248